# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ.925/2024

ಸಾಕ್ಷಿಗೆ ದಿನಾಂಕ 21-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 01 P.W.: 03

| | | |
|---|---|---|
| ಹೆಸರು | ಃ | ಧನಂಜಯ ಎಂ |
| ತಂದೆಯ ಹೆಸರು | ಃ | ನಾಗಯ್ಯ ಸ್ವಾಮಿ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಪಿಎಸ್ ಐ |
| ವಾಸ ಸ್ಥಳ | ಃ | ಹನುಮಸಾಗರ ಪೋಲೀಸ್ ಠಾಣೆ ಕೊಪ್ಪಳ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 14-04-2022 ರಿಂದ 28-06-2024 ರವರೆಗೆ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25.03.2024 ರಂದು ಮದ್ಯಾಹ್ನ 2.30 ಕ್ಕೆ ನಾನು ಠಾಣೆಯಲ್ಲಿದ್ದಾಗ ಬೀಟ್ ಸಿಬ್ಬಂದಿಯಾದ ಚಾಸ 4 ರವರು ಬಂದು ಅವರು ಬೀಟ್ ವ್ಯಾಪ್ತಿಯ ಕಲ್ಲಹಳ್ಳಿ ತಾಂಡಾದ ಸೇವಾ ಲಾಲ್ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಅಂತಾ ನನಗೆ ತಿಳಿಸಿದರು. ಚಾಸಾ 6 ರವರ ಮೂಲಕ ನಾನು ಪಂಚರಾದ ಚಾಸಾ 2 , 3 ರವರನ್ನು ಠಾಣೆಗೆ ಬರಮಾಡಿಕೊಂಡು ಸದರಿ ಮಾಹಿತಿಯ ವಿಚಾರವನ್ನು ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದು ಅದಕ್ಕೆ ಅವರು ಒಪ್ಪಿದ್ದು ಇರುತ್ತದೆ. ನಾಂತರ ನಾನು ಚಾಸ 2 ರಿಂದ 7 ರವರು ಸೇರಿ ನಮ್ಮ ಇಲಾಖಾ ವಾಹನ ಕೆ 34 ಜಿ 621 ನೇದ್ದರ ಮೂಲಕ ಮದ್ಯಾಹ್ನ 3 ಗಂಟೆಗೆ ಠಾಣೆಯಿಂದ ಒರಟು ಮದ್ಯಾಹ್ನ 3.25 ಕ್ಕೆ ಕೃತ್ಯ ಸ್ಥಳದಿಂದ ಸ್ವಲ್ಪ ಸಮೀಪಕ್ಕೆ ವಾಹನವನ್ನು ನಿಲ್ಲಿಸಿ ವಾಹನದಿಂದ ಕೆಳಗೆ ಇಳಿದು ಕೃತ್ಯ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಮದ್ಯದ ಟೆಟ್ರಾ ಪ್ಯಾಕೆಟಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ಅವನು ನಮ್ಮನ್ನು ನೋಡಿ ತಾನು ಮಾರಾಟ ಮಾಡುತ್ತಿದ್ದ ಮದ್ಯವನ್ನು ಬಿಟ್ಟು ಓಡಿ ಹೋಗಿರುತ್ತಾನೆ. ನಂತರ ಆರೋಪಿತನು ಬಿಟ್ಟು ಓಡಿ ಹೋದ ಮದ್ಯದ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ 180 ಎಂ ಎಲ್ ನ 17 ಓಟಿ ಕಂಪನಿಯ ಟೆಟ್ರಾ ಪೌಚ್ಗಳು, 180 ಎಂ ಎಲ್ ನ 23 ಮ್ಯಾಕಿನ್ ಕೋಶ್ ಕಂಪನಿಯ ಟೆಟ್ರಾ ಪೌಚ್ಗಳು, 90 ಎಂ ಎಲ್ ನ ಓಸಿ ಕಂಪನಿಯ 96 ಟೆಟ್ರಾ ಪೌಚ್ಗಳು, ಹಾಗೂ 90 ಎಂ ಎಲ್ ನ ಐವರ್ಡಸ ವಿಸ್ಕಿ ಕಂಪನಿಯ ಟೆಟ್ರಾ ಪೌಚ್ಗಳು ಇದ್ದವು. ಸದರಿ ಮದ್ಯ 22 ಲಿ 230 ಎಂ ಎಲ್ ಇತ್ತು. ಅಲ್ಲಿ ಓಡಿ ಹೋದ ವ್ಯಕಿ2 ಯ ಬಗ್ಗೆ ವಿಚಾರಿಸಲಾಗಿ ಅವನ ಹೆಸರು ನಾಗರಾಜ ನಾಯಕ ಅಂತಾ ತಿಳಿಯಿತು. ಸದರಿ ಮದ್ಯವನ್ನು ನಾವು ಪಂಚರ

ಸಮ್ಮುಕದಲ್ಲಿ ಪಂಚನಾಮೆಯ ಮೂಲಕ ಅಮಾನತುಪಡಿಸಿಕೊಳ್ಳಲಾಯಿತು. ಪಂಚನಾಮೆಯನ್ನು ಆ ದಿನ ಮದ್ಯಾಹ್ನ 3.35 ಗಂಟೆಯಿಂದ 4.25 ಗಂಟೆಯವರೆಗೆ ಲ್ಯಾಪಟಾಪಲ್ಲಿ ತಯಾರಿಸಲಾಯಿತು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ 1 ಪಂಚನಾಮೆಯಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಸಿ ಅಂತಾ ಗುರುತಿಸಲಾಯಿತು. ಸಂಪೂರ್ಣ ಮುಮಾಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಜಪ್ತುಪಡಿಸಿ ಪಂಚರ ಸಮ್ಮುಖದಲ್ಲಿ ಒಂದು ಬಿಳಿ ಚೀಲದಲ್ಲಿ ಕಟ್ಟಿ ಅದಕ್ಕೆ ನಮ್ಮ ಠಾಣಾ ಮೊಹರನ್ನು ಹಾಕಿ ಪಂಚರ ಸಹಿ ಉಳ್ಳ ಚೀಟಿಗಳನ್ನು ಅಂಟಿಸಲಾಯಿತು. ಮುಮಾ ಮತ್ತು ಪಂಚನಾಮೆಯ ಸಮೇತ ಠಾಣೆಗೆ ಹಾಜರಾಗಿ ಸರಕಾರದ ಪರವಾಗಿ ಆರೋಪಿತನ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ ಅದನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ದಿ 29.03.2024 ರಂದು ಆರೋಪಿತನು ಠಾಣೆಯಲ್ಲಿ ತನಿಖಾದಿಕಾರಿಯ ಮುಂದೆ ಹಾಜರಾಗಿದ್ದು ಆರೋಪಿತನನ್ನು ನಾನು ಅಲ್ಲಿ ನೋಡಿ ಗುರುತಿಸಿರುತ್ತೇನೆ. ನಾನು ತನಿಖಾದಿಕಾರಿಯ ಮುಂದೆ ಈ ವಿಚಾರಕ್ಕಾಗಿ ಹೇಳಿಕೆಯನ್ನು ನೀಡಿರುತ್ತೇನೆ. ಮುಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುಮಾ 1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತನನ್ನು ನೋಡಿದರೆ ನಾನು ಗುರುತಿಸುತ್ತೇನೆ.ಆರೋಪಿತನು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಅವನ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಅಂತಾ ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಪಾಟೀ ಸವಾಲು. ಆರೋಪಿ ಪರ ಹೆಚ್ ಎಂ ವಕೀಲರಿಂದಃ- ಇಲ್ಲ

ಕೂಡ್ಲಿಗಿಯಿಂದ ಕಲ್ಲಹಳ್ಳಿ ತಾಂಡ ಸುಮಾರು 15 ಕಿಮೀ ಅಂತರವಿದೆ. ಕೂಡ್ಲಿಗಿ ಇಂದ ಕಲ್ಲಳ್ಳಿ ತಾಂಡಾಕೆ ಹೋಗಲು 2 ದಾರಿ ಇದೆ ಎಂದರೆ ಸರಿ. ನಾವು ಆ ದಿನ ಕೂಡ್ಲಿಗಿ ಇಂದ ಮದ್ಯಾಹ್ನ 3 ಗಂಟೆಗೆ ಬಿಟ್ಟಿರುತ್ತೇವೆ. ಪಂಚರನ್ನು ಠಾಣೆಗೆ ಕರುಹಿಸಲು ನಾನು ನೋಟಿಸನ್ನು ನೀಡಿಲ್ಲ. ಪಂಚರನ್ನು ಚಾಸಾ 6 ರವರು ಕರೆತಂದರು. ನಮ್ಮ ಇಲಾಖಾ ವಾಹನದಲ್ಲಿ ಪಂಚರನ್ನು ಸೇರಿ ಒಟ್ಟು 6 ಜನ ಹೋಗಿರುತ್ತೇವೆ. ಕೃತ್ಯ ಸ್ಥಳದಿಂದ 50 ಪೀಟ್ ಅಂತರದಲ್ಲಿ ವಾಹನವನ್ನು ನಿಲ್ಲಿಸಿರುತೇವೆ. ಕೃತ್ಯ ಸ್ಥಳಕ್ಕೆ ಯಾವ ದಿಕ್ಕಿನಿಂದ ಹೋಗಿರುತ್ತೇವೆ ಅನ್ನುವುದು ನನಗೆ ನೆನಪಿಲ್ಲ. ನನ್ನ ದೂರಿನಲ್ಲಿ ದೇವಸ್ಥಾನದ ಪಕ್ಕದ ರಸ್ತೆಯಲ್ಲಿ ಒಂದು ಮನೆಯ ಮುಂದೆ ಒಬ್ಬ ವ್ಯಕ್ತಿ ಮದ್ಯ ಮಾರಾಟ ಮಾಡುತ್ತ ಇದ್ದ ಅಂತಾ ಬರೆದಿದ್ದು ಇದ್ದು ಆ ಮನೆ ಯಾರದು ಅಂತಾ ನಾನು ವಿಚಾರ ಮಾಡಿಲ್ಲ. ಸೇವಾಲಾಲ್ ದೇವಸ್ಥಾನದ ಬಳಿ ಸಾಕಷ್ಟು ಜನ ಇರುತ್ತಾರೆ ಅಂದರೆ ಸರಿ. ಸದರಿ ದೇವಸ್ಥಾನದ ಸುತ್ತಮುತ್ತ ಜನ ಇರುತ್ತಾರೆ ಎಂದರೆ ಸರಿ. ನಮನ್ನು ಆರೋಪಿತನ ಬಳಿ ಇದ್ದ ಜನರು ಓಡಿ ಹೋಗಿರುತ್ತಾರೆ ಅವರು ಯಾವ ದಿಕ್ಕಿನ ಕಡೆಗೆ ಓಡಿ ಹೋದರು ಅನ್ನುವುದು ನನಗೆ

ನೆನಪಿಲ್ಲ. ಓಡಿ ಹೋದ ವ್ಯಕ್ತಿಯ ಬಗ್ಗೆ ನಾನು ಅಲ್ಲಿದ್ದವರಿಂದ ವಿಚಾರಿಸಿದ್ದೆ ಅಂತಾ ಹೇಳಿದ್ದು ಅವರು ಯಾರು ಎಂದರೆ ಸಾಕ್ಷಿಯು ಮಾಹಿತಿ ನೀಡಿದವರು ಅವರ ಹೆಸರನ್ನು ನನಗೆ ಹೇಳಲಿಲ್ಲ ಅಂತಾ ಹೇಳಿರುತ್ತಾರೆ. ಪಂಚನಾಮೆಯನ್ನು ಚಾಸಾ ೬ ರವರು ಲ್ಯಾಪಟಾಪಲ್ಲಿ ಟೈಪ ಮಾಡಿದರು. ಸ್ಥಳೀಯರನ್ನು ವಿಚಾರಣೆ ಮಾಡಿದಾಗ ಸಮಯ ಎಷ್ಟಾಗಿತ್ತು ಎನ್ನುವುದು ನನಗೆ ನೆನಪಿಲ್ಲ. ಕೃತ್ಯ ಸ್ಥಳದ ಪೂರ್ವಕ್ಕೆ ತಾಂಡಾದ ಒಳಗಡೆ ಹೋಗುವ ದಾರಿ, ಪಶ್ಚಿಮಕ್ಕೆ ಆರೋಪಿತನ ಮನೆ, ಉ ಸೇವಾಲಾಲ ದಾರಿ, ದ ಕೂಡ್ಲಿಗಿಗೆ ಹೋಗುವ ದಾರಿ. ಸದಿರಿ ಮೂಮಾಗಳಂತಹ ಟೆಟ್ರಾ ಪ್ಯಾಕೆಟ ಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಸ್ಥಳದಲ್ಲಿ ಕೃತ್ಯ ಸ್ಥಳದ ನಕಾಶೆಯನ್ನು ತಯಾರಿಸಿರುವುದಿಲ್ಲ. ಆರೋಪಿತನು ಯಾವುದೇ ತಪ್ಪನ್ನು ಮಾಡಿರುವುದಿಲ್ಲ, ಆರೋಪಿಗೂ ಮುಮಾಗಳಿಗೂ ಯಾವುದೇ ಸಂಬಂದ ಇಲ್ಲ, ನಾನು ಯಾವುದೇ ದಾಳಿ ಮಾಡಿಲ್ಲ, ಆರೋಪಿತನಿಂದ ಯಾವುದೇ ಮೂಮಾ ಗಳನ್ನು ಅಮಾನತು ಪಡಿಸಿಕೊಂಡಿಲ್ಲ, ಪಂಚನಾಮೆ ಜರುಗಿಸಿಲ್ಲ,ಎಂದರೆ ಸರಿಯಲ್ಲ, ನಮ್ಮ ಠಾಣೆಯ ಅಂಕೆ ಸಂಖ್ಯೆಯ ಸಲುವಾಗಿ ಆರೋಪಿತನ ವಿರುದ್ಧ ಸುಳ್ಳು ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ